

ಲಕ್ಕುಂಡಿಯ ಜೈನಬಸದಿ

ಗುಡ್ಯಾಗ ಒಂದ ಕಂಬಕ್ಕ ಕುಮಾರವ್ಯಾಸನ ಕಂಬ ಅಂತನ ಕರೀತಾರ ಇನ್ನು ಲಕ್ಕುಂಡಿಗೆ ಹೋಗು ದಾರಿಯೊಳಗ ಗದಗಬೆಟಗೇರಿ ಅವಳಿ ನಗರದ ಐತಿಹಾಸಿಕ ‘ಭೀಷ್ಮಕೆರೆ’ ಕಾಣತ್ತ. ಅದ್ರೊಳಗ ದೇಶದಲ್ಲೇ ಅತಿ ಎತ್ತರದ ಬಸವೇಶ್ವರ ಮೂರ್ತಿಗಳಲ್ಲಿ ಒಂದಾದ ವಿಶ್ವಗುರು ಬಸವಣ್ಣನವರ ಪ್ರತಿಮೆ ಸೂಜಿಗಲ್ಲಿನ್ಹಾಂಗ ಸೆಳದಬಿಡತ್ತ. ಅದ್ಭುತವಾಗಿ ನಿರ್ಮಾಣಗೊಂಡೈತಿ. ಅದರ ಕೆಳಗಡೆ ಸುತ್ತಲೂ ಶರಣರ ಕಥೆಯ ಅನೇಕ ಕಲಾಮೂರ್ತಿಗಳು ಅದಾವು.

ಇಲ್ಲಿಂದ ಸಮೀಪದ ಇತಿಹಾಸ ಪ್ರಸಿದ್ಧ ಲಕ್ಕುಂಡಿಯೊಳಗ ಕಾಶಿ ವಿಶ್ವನಾಥ ದೇವಾಲಯ, ಅತ್ತಿಮಬ್ಬೆ ಕಟ್ಟಿಸಿದ ಜೈನಬಸದಿ ಅಥವಾ ಬ್ರಹ್ಮ ಜಿನಾಲಯ, ಮತ್ತ ನನ್ನೇಶ್ವರ ದೇವಾಲಯ ಪ್ರಮುಖ ಅಂತ ಹೇಳ್ಬಹುದು. ಇವೆಲ್ಲ ಚಾಲುಕ್ಯರ ಕಾಲದಾಗ ನಿರ್ಮಾಣ ಆಗ್ಯಾವು. ಲಕ್ಕುಂಡಿಗೆ ನೂರು ಬಾವಿ ನೂರು ದೇವಸ್ಥಾನಗಳನ್ನು ಹೊಂದಿತ್ತು ಅನ್ನು ಹೆಗ್ಗಳಿಕೆ ಐತಿ. ಅದ್ರೊಳಗ ಮುಸ್ಕಿನಭಾವಿ ಪ್ರಸಿದ್ಧ ಐತಿ. ಇಲ್ಲಿ ಸರಕಾರದ ವತಿಯಿಂದ ‘ಲಕ್ಕುಂಡಿ ಉತ್ಸವ’ ಅತ್ಯಂತ ವೈಭವದಿಂದ ನಡಿತೈತಿ. ಹಾಂಗ ಲಕ್ಮೇಶ್ವರದ ಸೋಮನಾಥ ದೇವಾಲಯ, ಡಂಬಳದ ದೊಡ್ಡಬಸಪ್ಪ ದೇವಸ್ಥಾನ, ಸೂಡಿಯಲ್ಲಿರುವ ಜೋಡು ಕಳಸದ ಗುಡಿ, ಗಜೇಂದ್ರಗಡದ ಎತ್ತರದ ಕೋಟೆ ಮತ್ತು ಕಾಲಕಾಲೇಶ್ವರ ದೇವಸ್ಥಾನ ಮುಂತಾದವು ಶಿಲ್ಪಕಲಾ ವೈಭವದಿಂದ ಕೂಡ್ಯಾವು.

ಇದೆಲ್ಲಾ ಸರಿ, ಮಕ್ಕಳಿಗೆ ಆಟಾಪಾಠ ಏನಿಲ್ಲನು? ಅನ್ನೋಕೇಬೇಡ್ರಿ. ಆಡಾಕ ಸಮೀಪದ ಬಿಂಕದಕಟ್ಟಿಯೊಳಗ ಪ್ರಾಣಿಸಂಗ್ರಹಾಲಯ ಮತ್ತು ಅತ್ತಿಮಬ್ಬೆ ಗಾರ್ಡನ್ ಐತಿ. ಕೆ.ಎಚ್. ಪಾಟೀಲರ ಜಿಲ್ಲಾ ಕ್ರೀಡಾಂಗಣ ಐತಿ. ಇಲ್ಲಿ ವಿವಿಧ ಆಟಗಳ ತರಬೇತಿ ಶಾಲೆ ಐತಿ. ಭಾರತ ತಂಡವನ್ನು ಪ್ರತಿನಿಧಿಸಿದ ಕ್ರಿಕೆಟ್ ಪಟು ‘ಸುನೀಲ ಜೋಶಿ’ ನಮ್ಮ ಗದಗ್ಯಾರು ಅನ್ನೂದು ನಮಗ ಹೆಮ್ಮೆ ವಿಷ್ಯ. ಹಾಂಗ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಬಂಗಾರ ಮತ್ತ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಗೆದ್ದ ಅಂತರಾಷ್ಟ್ರೀಯ ಕುಸ್ತಿಪಟು ‘ಪ್ರೇಮಾ ಹುಚ್ಚಣ್ಣವರ’ ತಾಲೂಕಿನ ಅಸುಂಡಿ ಗ್ರಾಮದವರು.


ನಮ್ಮ ಗದಗ ಬಯಲನಾಡಾದ್ರು ಅದನ್ನ ಮರ್ಸುವಂತ ಒಂದ ಪ್ರದೇಶ ಐತಿ. ಅದ್ಯಾವುದು ಅಂದ್ರ ‘ಕಪ್ಪತಗುಡ್ಡ’ ಅಥವಾ ‘ದ್ರೋಣಗಿರಿ’. ಇದು ಗದುಗಿನ ಬಿಂಕದಕಟ್ಟಿ ಗ್ರಾಮದಿಂದ ಹಿಡಿದು ಶಿಂಗಟಾಲೂರತನಕ ಹಬ್ಬೈತಿ. ಗದುಗಿನ ಸಹ್ಯಾದ್ರಿ ಅಂತ ಕರೀಬಹುದನ್ಸತ್ತ ಇದಕ್ಕ. ಯಾಕಂದ್ರ ಎತ್ತರದ ಗಿಡಮರಗಳಿಂದ ಕೂಡಿದ್ದು, ಸಾವಿರಕ್ಕೂ ಹೆಚ್ಚು ಔಷಧಿ ಸಸ್ಯಗಳ ಸಮೃದ್ಧಿ ಸಿರಿ ಇದು. ಕೆಲವು ವನ್ಯ ಮೃಗಗಳು ಇಲ್ಲಿ ಸಿಗ್ತಾವು. ಮಳೆಗಾಲದಾಗ ಇದರ ಅಂದಾ ಇಮ್ಮಡಿ ಆಗತ್ತ. ಮುಂಜಾನೆಯ ಸೊಬಗು ಮಂಜಿನಿಂದ ಕೂಡಿ ಎಲ್ಲರ ಕಣ್ಮನಗಳನ್ನು ತಣಿಸುವಂತ ಶಕ್ತಿ ಐತಿ ಈ ಗುಡ್ಡಕ್ಕ. ಈ ಸೌಂದರ್ಯ ಸರಸ್ವತಿಯ ಅಡಿಯಲ್ಲಿ ಕಪ್ಪತ್ತ ಮಲ್ಲೇಶ್ವರ ದೇವಸ್ಥಾನ ಐತಿ. ಪ್ರತಿವರ್ಷ ಶ್ರಾವಣ ಮಾಸದಲ್ಲಿ ಜಾತ್ರೆ ಕೂಡಾ ನಡೀತೈತಿ. ಈ ಕಪ್ಪತ್ತ ಮಲ್ಲಯ್ಯನ ಸನ್ನಿಧಿಯಲ್ಲಿ ಪ್ರಕೃತಿತಾಯಿ ವೈಭವವನ್ನ ನೀವೆಲ್ರೂ ಒಮ್ಮೆ ಕಣ್ತುಂಬಿಕೊಳ್ಳಾಕ ಬೇಕು.

ಇಲ್ಲಿ ಸಾಕಷ್ಟು ವಾಣಿಜ್ಯ ಮಳಿಗೆಗಳು ಅದಾವು. ಸಾರೀಪ್ರೀಯ ನಾರಿಮಣಿಯರಿಗೆ ಗದಗ ಬೆಟಗೇರಿ ಅವಳಿನಗರದಲ್ಲಿ ಬೆಟಗೇರಿ ಅಂದ್ರ ಬಾಳ ಇಷ್ಟ. ಯಾಕಂದ್ರ ಬೆಟಗೇರಿಯೊಳಗ ಸಾಕಷ್ಟು ಕೈಮಗ್ಗಗಳಾದಾವು. ಇಲಕಲ್ ಸೀರೆಯ ಮಾದರಿಯಂಗ ಇಲ್ಲೂ ಚಂದದ ಸೀರಿ ನೇಯ್ತಾರ. ಇನ್ನೊಂದು ವೈಶಿಷ್ಟ್ಯತೆಯಂದ್ರ ಇಲ್ಲಿ ಗಾಡಿದಡಿ ಸೀರಿ ಫೇಮಸ್. ಗದಗ ಬೆಟಗೇರಿಗೆ ರೈಲು ಹಳಿ ಬಂದಾಗ ಕುಶಲ ನೇಕಾರರು ಹಳಿಗಳ ಚಿತ್ರಣವನ್ನು ಸೀರಿದಡಿಯೊಳಗ ತಂದ್ರಂತ. ಆವಾಗಿಂದ ಬೆಟಗೇರಿ ಸೀರಿಗೆ ಗಾಡಿದಡಿ ಸೀರಿ ಅಂತ ಕರೀತಾರ. ಅಷ್ಟ ಅಲ್ದ ಲಕ್ಕುಂಡಿಯೊಳಗ, ಸಿಗ್ಲಿಯೊಳಗ ಮತ್ತ ಗಜೇಂದ್ರಗಡದಾಗ ಸೀರೆಯನ್ನು ನೇಯ್ತಾರ. ಇಲ್ಲಿನ ಸೀರೆಗಳಿಗೆ ಅನೇಕ ಸೆಲೆಬ್ರೆಟಿಗಳ ಬೇಡಿಕೆಯೂ ಇದೆಯಂತ ಇಲ್ಲಿನ ಸೀರೆ ವ್ಯಾಪಾರಿಗಳು ಹೇಳ್ತಾರ.

ಇಲ್ಲಿನ ಕೃಷಿ ಭೂಮಿಯೊಳಗ ಜೋಳ, ಕಡ್ಲಿ, ಹೆಸರು, ಹತ್ತಿ, ಶೇಂಗಾ ಮುಂತಾದ ಬೆಳೆಗಳನ್ನ ಬೆಳೀತಾರ. ಇಲ್ಲಿ ರೈತಾಪಿ ಕುಟುಂಬಗಳು ಬಾಳ ಅದಾವು. ಇಷ್ಟೆಲ್ಲಾ ಸಿರಿ ಸಮೃದ್ಧಿ ನಮ್ಮ ಗದಗ್ಯಾಗ ಐತಿ. ಇನ್ನಷ್ಟು ಬೆಳೀಬೇಕ ಅನ್ನೂದ ನಮ್ಮ ಆಶಾ.

ಹೆಸರಾಯಿತು ಕರ್ನಾಟಕ
ಉಸಿರಾಗಲಿ ಕನ್ನಡ
ಹಸಿಗೋಡೆಯ ಹರಳಿನಂತೆ
ಹುಸಿಹೋಗದ ಕನ್ನಡ...

ಕವಿಮಹೀಮರ ಮಾತಿನಂತೆ ನಮ್ಮ ಕನ್ನಡದ ಜೊತೆಗೆ ನಮ್ಮ ಗದಗು ಬೆಳೀಲಿ ಅಂತ ಹಾರೈಸಿ ಪ್ರಯಾಣಕ್ಕ ವಿರಾಮ ನೀಡ್ತಿನಿ. ಓದಿದವರೆಲ್ಲಾ ಒಮ್ಮೆ ಬಂದು ಗದಗ ನೋಡ್ಬೇಕಾ ಮತ್ತ...



ಕಳೆದ ವಾರದ ‘ಚೆನ್ನುಡಿ’
‘ಬಂದ್ರೇ... ಬಂದ್ರೇ...’ ಕೇಳಿ
**ಎಚ್.ಎಸ್. ನವೀನ ಕುಮಾರ್**
ಅವರ ಧ್ವನಿಯಲ್ಲಿ

ಪಾಡ್‌ಕಾಸ್ಟ್ ಕೇಳಲು
ಕ್ಯೂಆರ್ ಕೋಡ್
ಸ್ಕ್ಯಾನ್ ಮಾಡಿ.